International Journal of Multidisciplinary Research and Development
Online ISSN: 2349-4182 Print ISSN: 2349-5979
www.allsubjectjournal.com
Volume 3; Issue 2; February 2016; Page No. 89-94

# ಕಲಬುರಗಿ ಜಿಲ್ಲಾ ಪತ್ರಿಕೋದ್ಯಮ (ಹೈದ್ರಾಬಾದ ಕರ್ನಾಟಕ ಪತರತ್ರಿಕೆಗಳ ಐತಿಹಾಸಿಕ ಅಧ್ಯಯನ)

[1] Saradar Rayappa Soppi, [2] Dr. Basavaraj Sabarda, [3] Dr. Mariswamy HK

[1] Reseach scholar, Dept of Journalism and mass communication, Gulbarga University Kalaburagi, India.

[2] Reseach Guide Dept of Kannada, Gulbarga university kalaburagi, India.

[3] Reseach Co-Guide, Dept of Journalism and mass communicatin, University of Bengaluru, India.

ಕಲಬುರಗಿ ಲಿಲ್ಲೆಯಲ್ಲಿ ಜನ್ಮ ತಳೆದ ಪತ್ರಿಕೆಗಳು ವೈವಿಧ್ಯಪೂರ್ಣದಿಂದ ಕೂಡಿವೆ. ಸಾಮಾನ್ಯವಾಗಿ ಎಲ್ಲ ಕಡೆ ಇರುವಂತೆ ಈ ಜಿಲ್ಲೆಯ ಪತ್ರಿಕೆಗಳು ಕೂಡ ಸ್ವಾತಂತ್ರ್ಯ ಹೋರಾಟ, ಹೈದ್ರಾಬಾದ್ ವಿಮೋಚನೆ ಚಳುವಳಿ, ಕರ್ನಾಟಕ ಏಕೀಕರಣ. ಹಾಗೂ ಶೈಕ್ಷಣಿಕ, ಸಾಹಿತ್ತಿಕ, ಸಾಂಸ್ಕೃತಿಕ, ಧಾರ್ಮಿಕ ಚಟುವಟಿಕೆ ಮುಂತಾದ ಉದ್ದೇಶಗಳಿಗಾಗಿ ಉಪಯುಕ್ತ ಹಾಗೂ ಪೂರಕ ಸಾಧನಗಳಾಗಿ ಕಾರ್ಯ ನಿರ್ವಹಿಸಿವೆ. ಕನ್ನಡ ಭಾಷೆ ತೀರಾ ಅಪಾಯಕಾರಿ ಸ್ಥಿತಿಯಲ್ಲಿದ್ದಾಗ ಅದನ್ನು ಕಟ್ಟಿ ಉಳಿಸಿ ಬೆಳೆಸುವ ಕಾರ್ಯದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿವೆ. ವಿಭಿನ್ನ ಧೋರಣೆ, ನಿಲುವು, ತತ್ವ, ಆಧರ್ಶಗಳನ್ನು ಪ್ರತಿಪಾದಿಸುವ ಇಲ್ಲಿಯ ಪತ್ರಿಕೆಗಳು ಸಾಮಾಜಿಕ ಪರಿವರ್ತನಾಕ್ರಿಯೆಯಲ್ಲಿ ಮಹತ್ತರವಾದ ಪಾತ್ರ ವಹಿಸಿವೆ.

ಬೇರೆ ಕಡೆಯಲ್ಲಿ ಜನ್ಮ ತಳೆದ ಪತ್ರಿಕೆಗಳೊಂದಿಗೆ, ಅದರಲ್ಲೂ ಮುಖ್ಯವಾಗಿ ಬೆಂಗಳೂರು–ಹುಬ್ಬಳ್ಳಿಯಿಂದ ಪ್ರಕಟವಾಗಿ ಬರುವ ರಾಜ್ಯಮಟ್ಟದ ಪತ್ರಿಕೆಗಳು ಜಿಲ್ಲೆಯ ಸರ್ವಾಂಗೀಣ ಅಭಿವೃದ್ಧಿಯಲ್ಲಿ ಮಹತ್ವದ ಪಾತ್ರ ವಹಿಸಿವೆ. ಹೈದ್ರಾಬಾದನಿಂದ ಪ್ರಕಾಶಗೊಳ್ಳುವ ಉರ್ದು ಪತ್ರಿಕೆಗಳು ಮತ್ತು ಮುಂಬೈಯಿಂದ ಪ್ರಕಟವಾಗಿ ಬರುತ್ತಿದ್ದ ಹಿಂದಿ ಪತ್ರಿಕೆಗಳು ಜಿಲ್ಲೆಯಲ್ಲಿ ಅತ್ಯಂತ ಪ್ರಭಾವ ಶಾಲಿಯಾಗಿದ್ದವು. ಮುಂಬೈ, ಪುಣೆ, ಸೋಲಾಪುರದಿಂದ ಪ್ರಕಟವಾಗಿ ಬರುವ ಮರಾಠಿ ಪತ್ರಿಕೆಗಳು ತಮ್ಮದೇ ಆದ ಸ್ಥಾನವನ್ನು ಪಡೆದುಕೊಂಡಿವೆ. ಕನ್ನಡ, ಉರ್ದು, ಮರಾಠಿ ಹೀಗೆ ತ್ರಿಭಾಷಾ ಸಂಗಮವಾಗಿರುವ ಕಲಬುರಗಿಯಲ್ಲಿ ಬಹುಭಾಷಾ ಸಂಸ್ಕೃತಿಯನ್ನು ಗಟ್ಟಿಗೊಳಿಸುವಲ್ಲಿ ಪತ್ರಿಕೆಗಳು ನೀಡಿದ ಕಾಣಿಕೆ ಅನುಮಪವಾದದು. ಆದರೆ ಕೆಲವು ಪತ್ರಿಕೆಗಳು. ಭಾಷಾ ವೈಷಮ್ಯವನ್ನು ಮೆರೆದದ್ದೂ ಉಂಟು! ಕೆಲವು ಉರ್ದು ಮತ್ತು ಮರಾಠಿ ಪತ್ರಿಕೆಗಳು ಪತ್ರಿಕೋದ್ಯಮದ ಹುಟ್ಟು ಮತ್ತು ಬೆಳವಣಿಗೆಯ ಪ್ರಾರಂಭದ ಹಂತದಲ್ಲಿ ಕನ್ನಡ ವಿರೋಧಿ ನಿಲುವನ್ನು ತಾಳಿದ್ದು ಸುಳ್ಳೇನಲ್ಲ.

ಈ ಜಿಲ್ಲೆಯಲ್ಲಿ ಪತ್ರಿಕೋದ್ಯಮ ಜನ್ಮ ತಳೆದದ್ದು ಇಪ್ಪತ್ತನೇಯ ಶತಮಾನದ ಪ್ರಾರಂಭದಲ್ಲಿ. ಐತಿಹಾಸಿಕವಾಗಿ, ಚಾರಿತ್ರಿಕವಾಗಿ ಕನ್ನಡ ಭಾಷೆ, ಸಾಹಿತ್ಯ, ಶಿಕ್ಷಣ, ಸಂಸ್ಕೃತಿಯ ಮೇರು ಜಿಲ್ಲೆಯಾಗಿದ್ದರೂ ಸುಮಾರು ಆರು ಶತಮಾನಗಳ ಕಾಲದ ಮೊಗಲರ ಆಳ್ವಿಕೆಯಿಂದಾಗಿ ಅವೆಲ್ಲವೂ ಭೂಗತವಾಗಿದ್ದವು. ಎಷ್ಟೋ ಸಂದರ್ಭಗಳಲ್ಲಿ ಕನ್ನಡ ಭಾಷೆಯ ಅಸ್ತಿತ್ವವೇ ಅನುಮಾನಸ್ಪದವಾಗಿತ್ತು. ಮರಾಠಿಯ ಪ್ರಾಬಲ್ಯ, ಉರ್ದುವಿನ ಅಟ್ಟಹಾಸ, ಹಿಂದಿಯ ಬಳಿಕೆಯಿಂದಾಗಿ ಕನ್ನಡ ಸಹಜವಾಗಿಯೇ ಮೂಲೆಗುಂಪಾಗಿತ್ತು. ಈ ಒಂದು ಕಾರಣದಿಂದಾಗಿ ಕನ್ನಡ ಪತ್ರಿಕೆಗಳು ಈ ಜಿಲ್ಲೆಯಲ್ಲಿ ಬೆಳೆದು ಬರಲು ತನ್ನದೇ ಆದ ಸಮಯ ಹಿಡಿಯಿತು. ಕನ್ನಡ ಪತ್ರಿಕೆ ನಡೆಸುವುದು ಒಂದು ದೊಡ್ಡ ಸಾಹಾಸವೇ ಆಗಿತ್ತು. ಇಂತಹ ದಯನೀಯ ಪರಿಸ್ಥಿತಿಯಲ್ಲಿ ಕನ್ನಡ ಪತ್ರಿಕೆಗಳು ಜನ್ಮ ತಳೆದು, ಉಳಿದು, ಬೆಳೆದು ಬರಬೇಕೆಂದು ನಿರೀಕ್ಷಿಸುವುದು ಉಚಿತವೇನಿಸುವುದಿಲ್ಲ. ಆದಾಗ್ಯೂ, ಸಂದರ್ಭದ ಕರೆಗೆ ಅನುಗುಣವಾಗಿ ಕನ್ನಡ ಪ್ರಿಕೆಗಳು ಜನ್ಮ ತಳೆದು ಕನ್ನಡದ ಕೈಂಕರ್ಯವನ್ನು ಕೈಕೊಂಡಿದ್ದು ಹರ್ಷದಾಯಕವಾಗಿದೆ. ಹತ್ತು ಹಲವು ಐತಿಹಾಸಿಕ, ಚಾರಿತ್ರಿಕ, ರಾಜಕೀಯ, ಸಾಂಸ್ಕೃತಿಕ ಕಾರಣಗಳು ಈ ಜಿಲ್ಲೆಯ ಕನ್ನಡ ಪತ್ರಿಕೋದ್ಯಮದ ಬೆಳವಣಿಗೆಗೆ ತೀವ್ರ ಆತಂಕಕಾರಿಯಾಗಿದ್ದು ಅವೆಲ್ಲವುಗಳನ್ನು ಮೆಟ್ಟಿ ಕೆಲವಾದರೂ ಕನ್ನಡ ಪತ್ರಿಕೆಗಳು ತಮ್ಮ ಸೇವೆಯನ್ನು ಸಮಾಜಕ್ಕೆ ಸಲ್ಲಿಸಿರುವುದು ಸಮಾಧಾನಕರ ಸಂಗತಿ.

ಕಲಬುರಗಿ ಜಿಲ್ಲೆಯಲ್ಲಿ ಪತ್ರಿಕೋದ್ಯಮಕ್ಕೆ ಬುನಾದಿ ಹಾಕಿದ್ದು ಮರಾಠಿ ಭಾಷೆ. ಈ ಮೊದಲು ಪ್ರಸ್ತಾಪಿಸಿರುವಂತೆ ಸುಮಾರು 1863ರಲ್ಲಿ ಪ್ರಕಟಗೊಂಡ 'ಗುಲ್ಬರ್ಗ ಸಮಾಚಾರ' ಎಂಬ ಮರಾಠಿ ಪತ್ರಿಕೆ ಜಿಲ್ಲೆಯ ಮೊಟ್ಟ ಮೊದಲ ಪತ್ರಿಕೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಪರಶುರಾಮ ಬೋಡ್ಸೆ ಅವರ ಸಂಪಾದಕತ್ವದಲ್ಲಿ ಹೊರ ಬಂದ ಈ ಪತ್ರಿಕೆ ಕನ್ನಡಕ್ಕೆ ಯಾವುದೇ ರೀತಿಯಿಂದ ಅನಕೂಲವಾಗಿರದಿದ್ದರೂ ಪತ್ರಿಕೋದ್ಯಮದ ಬೆಳೆವಣಿಗೆಯ ಬೀಜ ಬಿತ್ತುವಲ್ಲಿ ಯಶಸ್ವಿಯಾದದ್ದು ಮಾತ್ರ ಉಲ್ಲೇಖಾರ್ಹ.

ನಿಜಾಂ ಸರಕಾರದ ಕೆಂಗಣ್ಣಿಗೆ ಗುರಿಯಾದ ಪರಿಣಾಮವಾಗಿ ಈ ಪತ್ರಿಕೆ ಕೆಲ ಕಾಲ ಸ್ಥಗಿತಗೊಳ್ಳಲಾಯಿತೆಂದು ಹೇಳಲಾಗಿದೆ. ಇದರ ಪರಿಣಾಮವಾಗಿ ಬೋಡ್ಸೆ ಅವರು 'ಖೈರ್ ಖಾಹ್ ದಖನ್' ಎಂಬ ಉರ್ದು ಹೆಸರಿನ ಪತ್ರಿಕೆ ಪ್ರಾಂಭಿಸಿದ್ದರೂ ಪತ್ರಿಕೆ ವಾಸ್ತವವಾಗಿ ಮರಾಠಿ ಭಾಷೆಯಲ್ಲೇ ಇರುತ್ತಿತ್ತು.

ಕೆಲ ಕಾಲದನಂತರ ಹೊಸ ಪತ್ರಿಕೆಗಳ ಆಗಮನದ ಸರಣಿ ಕನ್ನಡೇತರ ಭಾಷೆಯದ್ದೇ. ಉಸ್ಮಾನ ಸಹರಾಯಿ ಅವರ ಸಂಪಾದಕ್ವದಲ್ಲಿ 'ಹಮ್‌ದರ್ದ್' ಮತ್ತು ಖಾಜಿ ಹಿಸಾಮುದ್ದೀನ ಅವರ ಸಂಪಾದಕತ್ವದಲ್ಲಿ 'ಗುಲ್ಬರ್ಗಾ' ಎಂಬ ಎರಡು ಉರ್ದು ಪತ್ರಿಕೆಗಳು ನಾಲ್ಕನೇ ಆಯಾಮದ ದಿಗಂತದಲ್ಲಿ ಉದಯಿಸಿದವು. ಈ ಎರಡು ಪತ್ರಿಕೆಗಳು ಆಡಳಿತ ಪರವಾಡ ದೋರಣೆ ಉಳ್ಳವುಗಳಾಗಿದ್ದವು. ಹೀಗೆ ಮರಾಠಿ ಮತ್ತು ಉರ್ದು ಪ್ರಾಬಲ್ಯ ಜಿಲ್ಲೆಯ ಪತ್ರಿಕಾ ಕ್ಷೇತ್ರದಲ್ಲಿ ಮುಂದುವರೆಯಿತು.

ಎತನ್ಮಧ್ಯ 1946ರಲ್ಲಿ ಕಲಬುರ್ಗಿಯಲ್ಲಿ ಮರಾಠಿ ಸಾಹಿತ್ಯ ಮಂಡಳಿ ಸ್ಥಾಪನೆಗೊಂಡು ಮರಾಠಿ ಸಾಹಿತ್ಯ ಸಾಂಸ್ಕೃತಿಕ ಚಟುವಟಿಕೆಗಳಿಗೆ ತನ್ನನ್ನು ಅರ್ಪಿಸಿಕೊಂಡಿತು. ಈ ಸಂಸ್ಥೆ 'ಅನುಬಂಧ' ಎಂಬ

ತ್ರೈಮಾಸಿಕವನ್ನು ಆರಂಭಿಸಿ ಸುಮಾರು 18 ವರ್ಷಗಳ ವರೆಗೆ ಮುಂದುವರೆಸಿಕೊಂಡು ಹೋಯಿತು.

ಕಲಬುರಗಿ ಜಿಲ್ಲೆಯ ಮೊದಲ ಕನ್ನಡ ಪತ್ರಿಕೆ ಆರಂಭಿಸಿದ್ದು ಈಗಿನ ಯಾದಗಿರಿ ಜಿಲ್ಲೆಯ ಸುರಪುರ ತಾಲ್ಲೂಕ ಕಲಬುರಗಿ ಜಿಲ್ಲೆಯ ಕನ್ನಡ ಪತ್ರಿಕೋದ್ಯಮಕ್ಕೆ ನಾಂದಿ ಹಾಡಿದ ಶ್ರೇಯಸ್ಸಿಗೆ ಪಾತ್ರವಾಗುತ್ತದೆ. ನಾಯಕ ದೊರೆಗಳ ಸಂಸ್ಥಾನವಾಗಿದ್ದ ಸುರಪುರದಲ್ಲಿ ಈ ಜಿಲ್ಲೆಯ ಮತ್ತು ಹೈದ್ರಾಬಾದ್ ಕರ್ನಾಟಕ ಬೇರೆ ಯಾವುದೇ ಭಾಗಕಿಂತಲೂ ಕನ್ನಡಕ್ಕೆ ಅನುಕೂಲಕರ ವಾತಾವರಣ ಇದ್ದದ್ದು ಗಮನಾರ್ಹ. ಅಂತೇಯ ಸುರಪುರದ ಮಣ್ಣಿನಲ್ಲಿ ಜಿಲ್ಲೆಯ ಕನ್ನಡ ಪತ್ರಿಕೋದ್ಯಮ ಮೊಳಕೆಯೊಡೆಯಲು ಸಾದ್ಯವಾಯಿತು.

1925ರಲ್ಲಿ ಗುರಯ್ಯ ಸೂಗುರಮಠ ಅವರು ಸುರಪುರ ತಾಲೂಕಿನ ರಂಗಂ ಪೇಟೆಯಿಂದ ಪ್ರಾರಂಭಿಸಿದ 'ನೈಜಾಂ ನ್ಯಾಯತೀರ್ಪು' ಎಂಬ ಮಾಸಪತ್ರಿಕೆಯನ್ನು ಕಲ್ಬುರ್ಗಿ ಜಿಲ್ಲೆಯ ಮೊಟ್ಟಮೊದಲು ಕನ್ನಡ ಪತ್ರಿಕೆ ಎಂದು ಗುರುತಿಸಬಹುದು. 1925 ರಿಂದ 1940ರ ವರೆಗೆ ಸುಮಾರು ಒಂದುವರೆ ದಶಕದ ಕಾಲ ಈ ಪತ್ರಿಕೆ ಪ್ರಕಟವಾಯಿತು. ಆರ್ಥಿಕ ಮುಗ್ಗಟ್ಟು, ಮುದ್ರಾಣಲಯ ಸೌಕರ್ಯಗಳ ಕೊರತೆಯ ಮಧ್ಯಯೂ ಅಂದಿನ ಕಾಲದಲ್ಲಿ ಕನ್ನಡದ ಮಾಸಪತ್ರಿಕೆಯೊಂದು ಹೈದಿನೈದು ವರ್ಷಗಳ ಕಾಲ ನಿರಂತರವಾಗಿ ನಡೆದದ್ದು ಒಂದು ವಿಶೇಷವಾಗಿದೆ.

ಗುರಯ್ಯ ಅವರೇ ಕೆಲ ವರ್ಷಗಳ ನಂತರ ತಮ್ಮ ಸಹೋದರನ ಹೆಸರಿನ ಸಂಪಾದಕತ್ತವದಲ್ಲಿ 'ನ್ಯಾಯ ಪ್ರಭಾ' ಎಂಬ ಮತ್ತೊಂದು. ಮಾಸಿಕವನ್ನು ಪ್ರಾರಂಭಿಸಿದರು. ಕುತೂಹಲಕರ ಮತ್ತು ಆಸಕ್ತಿದಾಯಕ ಸಂಗತಿಯೆಂದರೆ ಈ ಜಿಲ್ಲೆಯ ಮೊದಲ ಕನ್ನಡ ಪತ್ರಿಕೆ ಧಾರ್ಮಿಕ ಪತ್ರಿಕೆಯಾಗಲೀ, ಭಾಷಾ ವೈಷಮ್ಯದ ಪತ್ರಿಕೆ ಆಗಲಿ ಆಗಿರಲಿಲ್ಲ. ಅದು ರಾಜಕೀಯ ವರ್ತಮಾನವನ್ನು ಒಳಗೊಂಡ ಮುಖ್ಯವಾಹಿನಿಯ ಪತ್ರಿಕೆಯಾಗಿರಲಿಲ್ಲ. ಬದಲಿಗೆ ಈ ಎರಡು ಪತ್ರಿಕೆಗಳು ನ್ಯಾಯಾಲಯದ ತೀರ್ಪುಗಳಿಗೆ ಸಂಬಂಧಿಸಿದ್ದಾಗಿದ್ದವು. ಆಗಿನ ಕಾಲದಲ್ಲಿ ನಿಜಾಂ ಸರಕಾರದ ನ್ಯಾಯವ್ಯವಸ್ಥೆಯ ನ್ಯಾಯಾಲಯಗಳು ನೀಡಿದ ತೀರ್ಪುಗಳನ್ನು ಈ ಎರಡು ಪತ್ರಿಕೆಗಳು ಪ್ರಕಟಿಸುತ್ತಿದ್ದವು. ನಿಜಾಂ ಸರಕಾರದ ಆಡಳಿತ ವಯವಸ್ಥೆ, ನ್ಯಾಯಾಲಯಗಳ ವ್ಯವಸ್ಥೆ, ನ್ಯಾಯದಾನ ಪ್ರಕ್ರಿಯೆ ಮುಂತಾದವುಗಳನ್ನಲ್ಲ ಅಧ್ಯಯನ ಮಾಡಲು ಈ ಪತ್ರಿಕೆಗಳು ಸಹಕಾರಿಯಾಗಿದ್ದವು.

1940–42ರ ಸುಮಾರಿನಲ್ಲಿ ರಾಘವೇಂದ್ರ ಕುಷ್ಟಗಿ, ಭೀಮರಾವ್, ಗುರಾಚಾರ್ಯ ಬಂಡಿ, ಸಗರ ಕೃಷ್ಣಾಚಾರ್, ಎಂ. ಆರ್. ಬುದ್ಧಿವಂತ ಶೆಟ್ಟಿ ಅವರುಗಳು ಸುರಪುರ ಮತ್ತು ಶಾಪುರಗಳಿಂದ 'ಪುರಾಣ' ಎಂಬ ಕೈಬರಹದ ಪತ್ರಿಯನ್ನು ಹೊರಡಿಸುತ್ತಿದ್ದರು. ಸಗರ ಕೃಷ್ಣಾಚಾರ್ಯರು 'ವಿಕಾಸ' ಎಂಬ ಕೈಬರಹದ ಪತ್ರಿಕೆಯನ್ನು ಕೆಲಕಾಲ ನಡೆಸಿದರು.

ಈಲ್ಲೆಯ ಪತ್ರಿಕೋದ್ಯಮದ ಬೆಳವಣಿಗೆಯಲ್ಲಿ ಯಾದಗಿರಿ ಪ್ರಮುಖ ಪಾತ್ರವಹಿಸಿದೆ. ಕೆಲವು ಪತ್ರಿಕೆಗಳು ಯಾದಗಿರಿಯಲ್ಲಿ ಆರಂಭಗೊಂಡರೆ ಇನ್ನು ಕೆಲವು ಪತ್ರಿಕೆಗಳು ಬೇರೆ ಕಡೆ ಪ್ರಾರಂಭವಾಗಿ ಯಾದಗಿರಿಗೆ ಸ್ಥಳಾಂತರಗೊಂಡವು. ಕನ್ನಡ ಭಾಷ, ಸಾಹಿತ್ಯಕ್ಕೆ ಸಂಬಂಧಿಸಿದ ಪ್ರಾಯಶಹ ಹೈದ್ರಾಬಾದ್ ಕರ್ನಾಟಕದ ಮೊಲ ಪತ್ರಿಕೆ 'ಧರ್ಮ ಸಂಜೀವಿನಿ ಜನ್ಮ ತಳೆದದ್ದು ಯಾದಗಿರಿಯಲ್ಲಿ. ವಾಸ್ತವಾಗಿ ಈ ಪತ್ರಿಕೆ 1924ರಿಂದ ರಾಯಿಚೂರಿನಿಂದ ಪ್ರಕಟವಾಗತ್ತಿತ್ತು. ಬಸವರಾಜ ಶಾಸ್ತ್ರಿ ನಾಯಕಲ್ ಅವರು ಸಂಪಾದಕರಾಗಿದ್ದ ಈ ಪತ್ರಿಕೆ ರಾಯಿಚೂರಿನಲ್ಲಿ ಆರು ವರ್ಷ ನಡೆಯಿತು. 1930ರಲ್ಲಿ ಶಾಸ್ತ್ರಿಗಳು ಅದನ್ನು ಯಾದಗಿರಿಗೆ ವರ್ಗಾಯಿಸಿದರು. ಯಾದಗಿರಿಯಲ್ಲಿ ಅದು ಕೆಲವೇ ಕೆಲವು ವರ್ಷ ಪ್ರಕಟವಾದರೂ ಆ ಕಾಲದ ದುರ್ಭರ ಸಂದರ್ಭದಲ್ಲಿ ಪತ್ರಿಕೆ ಕನ್ನಡ ಜಾಗೃತಿಗಾಗಿ ಮಾಡಿದ ಕಾರ್ಯ ಪ್ರಶಂಸಾರ್ಹವಾದದ್ದು. ಪತ್ರಿಕೆಯಲ್ಲಿ ಕಥೆ ಕವನಗಳಿದ್ದರು ಧಾರ್ಮಿಕ ಲೇಖನಗಳೇ ಹೆಚ್ಚಾಗಿರತ್ತಿದ್ದವು.

ಸ್ವಾತಂತ್ರ್ಯ ಕರಪತ್ರ 1942ರ ಬ್ರಿಟೀಷರ ವಿರುದ್ಧ ಭಾರತ ಬಿಟ್ಟು ತೊಲಗಿ ಆಂದೊಲನದಿಂದ ಕಲ್ಬುರ್ಗಿ ಜಿಲ್ಲೆ ಪ್ರಭಾವಿತವಾಗಿತ್ತು. ಹೈದ್ರಾಬಾದ್ ಕರ್ನಾಟಕ ಪ್ರದೇಶ ನಿಜಾಂ ಶಾಹಿಯ ವ್ಯಾಪ್ತಿಯಲ್ಲಿದ್ದರೂ ರಾಷ್ಟ್ರೀಯ ಆಂದೋಲನದ ಗಾಳಿ ಈ ಪ್ರದೇಶಕ್ಕೆ ತಟ್ಟದೆ ಇರಲಿಲ್ಲ. 1945ರ ಸುಮಾರಿಗೆ ಈ ಚಳವಳಿ ತೀವ್ರ ಸ್ವರೂಪಕ್ಕೆ ತಿರುಗಿತು. ಈ ಪ್ರದೇಶದ ಜನರ ಸ್ವಾತಂತ್ರ್ಯದ ಹಂಬಲ ಬರಿ ಬ್ರಿಟೀಷರನ್ನು ಕುರಿತು ಆಗಿದ್ದಿರಲಿಲ್ಲ. ನಿಜಾಂ ಆಡಳಿತದ ವಿರುದ್ಧವೂ ಸ್ವಾತಂತ್ರ್ಯ ಆಂದೋಲವ ಆಗಲೇ ಶುರುವಿಟ್ಟುಕೊಂಡಿತ್ತು. ಸ್ವಾತಂತ್ರ್ಯ ಆಂದೋಲನದಲ್ಲಿ ಕರಪತ್ರ ಹಣಚಲಾರಂಭಿಸಿದರು.

ಈ ಸ್ವಾತಂತ್ರ್ಯ ಆಂದೋಲನದ ಕರಪತ್ರಗಳ ಪ್ರಯೋಗ ಮುಂದೆ ದತ್ತಾತ್ರೇಯ ಅವರಾದಿ ಅವರು ಪತ್ರಿಕೋದ್ಯಮ ಕ್ಷೇತ್ರಕ್ಕೆ ಧುಮುಕಲು ಪ್ರೇರಣೆ ನೀಡಿತು. ಅವರು 1944ರಲ್ಲಿ ಪ್ರಾರಂಭಿಸಿದ ಉಜ್ವಲ ರಾಷ್ಟ್ರೀಯತೆಯ 'ನಾಗರಿಕ' ವಾರಪತ್ರಿಕೆ ಕಲ್ಬುರ್ಗಿಯ ಜನಮಾನಸದಲ್ಲಿ ಸಂಚಲನವನ್ನುವುಂಟುಮಾಡಿತು. ಅನೇಕ ಜನರು ಅದರಲ್ಲೂ ಯುವಕರು ನಾಗರಿಕ ಪತ್ರಿಕೆಯ ಬರವಣಿಗೆಯಿಂದ ಪ್ರೇರಿತವಾಗಿ ಸ್ವಾತಂತ್ರ್ಯ ಆಂದೋಲನಕ್ಕೆ ಧುಮುಕುವಂತಾಯಿತು, ಸಾಮಾಜಿಕ ವಾತಾರಣ ಬದಲಾಗುತ್ತ ನಡೆದು ಸ್ವಾತಂತ್ರ್ಯ ಚಳುವಳಿ ಒಂದು ಪರಾಕಾಷ್ಠೆಯ ಹಂತ ತಲುಪುವಂತಾಯಿತು. ಪತ್ರಿಕೆಯಲ್ಲಿನ ಉಗ್ರ ಸ್ವರೂಪದ ಲೇಖನಗಳಿಂದ ಆಕರ್ಷಿತರಾಗಿ ಯುವಕರು ರಾಜಕೀಯ ಕ್ರಾಂತಿಯಲ್ಲಿ ಹೆಚ್ಚು ಹೆಚ್ಚು ಸಂಖ್ಯೆಯಲ್ಲಿ ಸಕ್ರೀಯರಾಗಿ ಪಾಲ್ಗೊಳ್ಳತೊಡಗಿದರು.

'ನಾಗರಿಕ'ಉಂಟು ಮಾಡುತಿದ್ದ ರಾಜಕೀಯ ಹಾಗೂ ರಾಷ್ಟ್ರೀಯ ಜಾಗೃತಿಯನ್ನು ನಿಜಾಂ ಸರಕಾರ ಸಹಿಸುವುದಾದರೂ ಹೇಗೆ? ಸಂಸ್ಕೃತಿಕ –ಸಾಹಿತ್ಯಕ ಚಟುವಟಿಕೆಗಳನ್ನೇ ಹದ್ದುಗಣ್ಣಿನಿಂದ ನೊಡುತಿದ್ದ ಸರಕಾರ ಸಾರ್ವಜನಿಕರ ಅಪಾಯಕಾರಿ ಆಸ್ತಿಯಾದ ಪತ್ರಿಕೆಗಳನ್ನು ಬಿಟ್ಟೀತೆ? ಸಾರ್ವಜನಿಕ ಸಬೆಗಳಲ್ಲಿ ಕನ್ನಡ ಭಾಷಣಗಳನ್ನು ಮಾಡುವ ಪ್ರಸಂಗ ಇದ್ದಾಗ ಭಾಷಣದ ಕರದನ್ನು ಉರ್ದುವಿಗೆ ಅನುವಾದಿಸಿ ಪೊಲಿಸರಿಂದ ಅನುಮತಿ ಪಡೆಯಭೇಕಿತ್ತು. ಅಖೀಲ ಕರ್ನಾಟಕ 16ನೆಯ ಕನ್ನಡ ಸಾಹಿತ್ಯ ಸಮ್ಮೇಳನ 1941ರ ಡಿಸೆಂಬರನಲ್ಲಿ ಹೈದ್ರಾಬಾದಿನಲ್ಲಿ ಏರ್ಪಾಟಾಗಿತ್ತು. ಸಮ್ಮೇಳನದ ಅದ್ಯಕ್ಷರಾದ ಎ.ಆರ್. ಕೃಷ್ಣಶಾಸ್ತ್ರೀ ಅವರ ಅಧ್ಯಕ್ಷಿಯ ಭಾಷಣವನ್ನು ಉರ್ದುವಿಗೆ ತುರ್ಜುಮೆ ಮಾಡಿ ಪೊಲಿಸರಿಂದ ಅನುಮತಿ ಪಡೆಯಲಾಗಿತ್ತು. ನಾಗರಿಕ ಶಕ್ತಿ ಬೆಳೆಯುತ್ತ ಹೊದಂತೆ ಸರಕಾರದ ವಕ್ರದೃಷ್ಟಿ ಬಲಗೊಳ್ಳುತ್ತ ಹೊಯಿತು. ನಿಜಾಂ ಸರಕಾರ ಪತ್ರಿಕೆಗಳನ್ನು ಮೂಟ್ಟುಗೊಲು ಹಾಕಿಕೋಂಡು ಅವರಾದಿ ಅವರನ್ನು ಬಂದಿಸಿ ಸೆರೆಮನೆಗೆ ಸಳ್ಳಿತು. ಅಬಿವ್ಯಕ್ತಿ ಸ್ವತಂತ್ರ್ಯದ ಪವಿತ್ರ ಹಕ್ಕಿನ ರಕ್ಷಣೆಗಾಗಿ ಜೈಲುವಾಸ ಅನುಭವಿಸಿದ ಈ ಭಾಗದ ಮೊದಲ ಪತ್ರಕರ್ತರೆಂದರೆ ಪ್ರಾಯಶಃ ದತ್ತಾತ್ರೆಯ ಅವರಾದಿ ಅವರು. ಕಾರಾಗೃಹದ

ಬಂಧನದಲ್ಲಿರುವಾಗಲೇ ಅವರಿಗೆ ಅನೇಕ ರಿತಿಯ ತೊಂದರೆಗಳನ್ನು ನಿಡಲಾಯಿತು.

ಸುಮಾರು ಇದೇ ಸಮಯಕ್ಕೆ ಹೆರೂರು ದತ್ತತ್ರೇಯ ರವ್ ಅವರ ಕೆಲವು ಕೈ ಬರಹದ ಸಂಚಿಕೆಗಳನ್ನು ಹೊರತಂದರು. ರಾಷ್ಟ್ರ ಭಕ್ತಿಯನ್ನು ಜಾಗೃತಗೊಳಿಸುವುದು, ಸಾಹಿತ್ಯಕ– ಸಂಸ್ಕೃತಿಕ ಆಸಕ್ತಿಯನ್ನು ಅರಳಿಸುವ ಉದ್ದೇಶವನ್ನು ಇದು ಹೊಂದ್ದಿತ್ತು. ಇದರ ಪ್ರೇರಣೆಯಿಂದಾಗಿಯೇ ವಸಂತ ಕುಷ್ಟಗಿ ಮತ್ತು ಲಕ್ಷ್ಮೀಕಾಂತ ಪಟ್ವಕರ್ ಕೈ ಜೋಡಿಸಿ "ಉದಯ'ಎಂಬ ಕೈ ಬರಹ ಪತ್ರಿಕೆಯನ್ನು 1947ರಲ್ಲಿ ಪ್ರಾರಂಭಿಸಿದರು. ಈ ಪ್ರಯೋಗ ಮೂರು ವರ್ಷಗಳ ಕಾಲ ನಡಿಯಿತು. ನಂತರ ಹನುಮಂತರಾವ್ ಕಾವ್ಯಾಳ ಅವರು 'ಪ್ರಕಾಶ' ಎಂಬ ಕೈಬರಹದ ಪತ್ರಿಕೆಯನ್ನು ಕೆಲ ಕಾಲನಡೆಸಿದರು.

ಇದರ ನಂತರ ಓಸ್ಮಾನಿಯ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ಪತ್ರಿಕೆಯಾಗಿ 'ತಾವರೆ' ಆರಂಭವಾಯಿತು. ಇದು ಮೈಸೂರು ವಿಶ್ವವಿದ್ಯಾಲಯದ 'ಪ್ರಬುದ್ಧ ಕರ್ನಾಟಕ', ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ 'ಕರ್ನಾಟಕ ಭಾರತಿ' ಮಾದರಿಯ ಪತ್ರಿಕೆಯಾಗಿತ್ತು. ನಂತರ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಕನ್ನಡ ಸಂಚಿಕೆಗಳು ಪ್ರಕಟವಾಗತೊಗಿದವು.

1938–39ರ ಸುಮಾರಿಗೆ ಭೀಮಸೇನರಾವ್ ತವಕ ಅವರು ತಮ್ಮ ಸಂಪಾದಕತ್ವದಲ್ಲಿ 'ಮಿಂಚು' ಎಂಬ ಕೈಬರಹದ ಪತ್ರಿಕೆ ವಾರ್ಷಿಕ ಸಂಚಿಕೆಯನ್ನು ಹೊರತರುತ್ತಿದ್ದರು. ಇದು ಪ್ರಧಾನವಾಗಿ ವಿದ್ಯಾರ್ಥಿಗಳ ಲೇಖನ, ಕಥೆ, ಕವನ ಇತ್ಯಾದಿಗಖನ್ನು ಒಳಗೊಂಡಿತ್ತು.

ಇಲ್ಲಿ ಉಲ್ಲೇಖಖಿಸಬೇಕಾದ ವಿಶೇಷ ಸಂಗತಿ ಏನೆಂದರೆ ತಾವು ಕೈ ಬರಹದ ಪತ್ರಿಕೆ 'ಉದಯ'ವನ್ನು ಪ್ರಾರಂಭಿಸಿದ ಸುಮಾರು 60 ವಸಂತಗಳ ನಂತರ ವಸಂತ ಕುಷ್ಟಗಿಯವರು 2008ರಲ್ಲಿ 'ಉದಯ' ಕೈಬರಹದ ಪತ್ರಿಕೆಗೆ ಮರುಜನ್ಮ ನೀಡಿದ್ದಾರೆ ! ಈಗ ಅದು ತಿಂಗಳಿಗೊಮ್ಮೆ ಕೈಬರಹದಲ್ಲೇ ಬರುತ್ತಿದ್ದು ಗತಕಾಲದ ಸಂಗತಿಗಳನ್ನು ಅತ್ಯಂತ ಸ್ವಾರಸ್ಯಕರವಾದ ರೀತಿಯಲ್ಲಿ ದಾಖಲಿಸುತ್ತ ಹೋಗುತ್ತದೆ. ಕೈಬರಹದ ಪತ್ರಿಕೋರ್ಧ್ಯಮದಲ್ಲಿ ಇದೊಂದು ವಿಶೇಷ ಬೆಳವಣಿಗೆಯೇ ಸರಿ.

ನಿಜಾಂ ಸರಕಾರದ ವಿರುದ್ಧ ಪೊಲೀಸ್ ಕಾರ್ಯಚರಣೆಗೆ ಮುಂಚೆ ಮಾರ್ಕೆಟಿಂಗ್ ಇನ್ಸ್‌ಪೆಕ್ಟರ್ ಆಗಿದ್ದ ಶ್ರೀನಿವಾಸಾಚಾರ್ ಹುಣಸಿಗಿ ಅವರು ಮಾರುಕಟ್ಟೆವಿಷಯಗಳಿಗೆ ಸಂಬಂಧಿಸಿದಂತೆ ಪ್ರತಿಯೊಂದನು ಹೊರಡಿಸುತ್ತಿದ್ದರು. ಈಗ ಪಕ್ಕಾಗಿರುವ ಬ್ಯೂಸ್‌ನೆಸ್ ಜರ್ನಾಲಿಸಮ್‌ನ ಕುರುಹುಗಳನ್ನು ಸುಮಾರು ಏಳು ದಶಕಗಳ ಹಿಂದೆಯೇ ಕಲ್ಬುರ್ಗಿಯಲ್ಲಿ ಗುರುತಿಸಬಹುದು.

ದತ್ತಾತ್ರೇಯ ಅವರಾದಿ ಅವರ ಮಾರ್ಗದರ್ಶನದಲ್ಲಿ ವಿರುಪಾಕ್ಷಪ್ಪ ಮೋದಿ ಅವರು 1948ರಲ್ಲಿ ಗುಲ್ಬರ್ಗದಲ್ಲಿ 'ಸ್ವರಾಜ್ಯ' ಎಂಬ ವಾರಪತ್ರಿಕೆ ಪ್ರಾರಂಭಿಸಿದರು. 'ನಾಗರಿಕ' ದಂತೆ 'ಸ್ವರಾಜ್ಯ'ವೂ ರಾಷ್ಟ್ರ ಪ್ರೇಮ ಉದ್ದೀಪನಗಳಿಸುವ ಸಾಹಸವಾಗಿತ್ತು. ಸ್ವಾತಂತ್ರ್ಯ ಚಳುವಳಿ, ಹೈದ್ರಾಬಾದ್ ವಿಮೋಚನೆ, ಸಾಮಾಜಿಕ ಸಮಸ್ಯೆ ಮುಂತಾದ ವಿಚಾರ ಪ್ರಚೋದಕ ವಿಷಯಗಳನ್ನು ಒಳಗೊಂಡು ಬರುತ್ತಿದ್ದ 'ಸ್ವರಾಜ್ಯ' ಸಾಕಷ್ಟು ಜನಪ್ರಿಯತೆಯನ್ನು ಗಳಿಸಿತು. ಈ ಪತ್ರಿಕೆ ಕೇವಲ ಮೂರು ವರ್ಷಕಾಲ ಬದುಕಿದ್ದರೂ ಅದು ಉತ್ತಮವಾದ ಸೇವೆ ಮಾಡಿದೆ.

1950ರ ಸುಮಾರಿಗೆ 'ಹೈದ್ರಾಬಾದ್ ಕನ್ನಡಿಗ' ಎಂಬ ಸಾಪ್ತಾಹಿಕ ಹಾಗೂ 'ಹೈದ್ರಾಬಾದ್ ಕರ್ನಾಟಕ' ಎಂಬ ದಿನ ಪತ್ರಿಕೆ ಎಸ್. ಆರ್. ಕಂಠಿ ಅವರ ಸಂಪಾದಕತ್ವದಲ್ಲಿ ಪ್ರಾರಂಭವಾದವು.

ಪ್ರಾಯಃ ಇದೇ ಸಮಯದಲ್ಲಿ ಜಿ. ವಿ. ಕುಲಕರ್ಣಿ ಹಾಗೂ ಕಾನ್ಯಾಳ ಹನುಮಂತರಾಯರು 'ಪ್ರಭಾತ' ಎಂಬ ಮಾಸಿಕವನ್ನು ಹೊರತಂದರು. ಇವರ ಜೊತೆಗೆ ಶ್ರೀನಿವಾಸ ಕುಲಕರ್ಣಿ. ಕೆ.ಎನ್.ದೇಶಪಾಂಡೆ ಅವರೂ ಕೈ ಜೋಡಿಸಿದ್ದರು. ಬಿ.ಮಾದೇವಪ್ಪ ಅವರ ಸಂಪಾದಕತ್ವದಲ್ಲಿ 'ಇಶ್ವಕಲ್ಯಾಣ' ಪತ್ರಿಕೆ ಯಾದಗಿರಿಯಿಂದಲೇ ಪ್ರಕಟವಾಗಿ ಸಾಕಷ್ಟು ಜನಪ್ರಿಯತೆ ಗಳಿಸಿತು. ಸ್ವಾತಂತ್ರ ಹೋರಾಟಗಾರರೂ, ಕನ್ನಡ ಏಕೀಕರಣ ಚಳುವಳಿಯ ನೇತಾರರೂ ಆಗಿದ್ದ ವಿಶ್ವನಾಥ ರೆಡ್ಡಿ ಮುದ್ನಾಳ ಅವರ ಒತ್ತಾಸೆ ಮೇರೆಗೆ ಬಿ.ಮಹದೇವಪ್ಪ ಅವರು 'ಪ್ರಜಾವಾಣಿ' ಪತ್ರಿಕೆಯ ಉಪಸಂಪಾದಕ ಹುದೆಯನ್ನು ತೊರೆದು ಯಾದಗಿರಿಯಲ್ಲಿ 'ವಿಶ್ವ ಕಲ್ಯಾಣ' ಪತ್ರಿಕೆಯನ್ನು ಪ್ರಾರಂಭಿಸಿ ಅದರ ಪೂರ್ಣ ಹೊಣೆಯನ್ನು ಹೊತ್ತುಕೊಂಡರು. ಈ ಪತ್ರಿಕೆ ವಚನ ಸಾಹಿತ್ಯ ಮತ್ತು ಶರಣ ಸಿದ್ಧಾಂತದ ಪ್ರತಿಪಾದನೆಯೊಂದಿಗೆ ಸಾಮಾಜಿಕ ಹಾಗೂ ಧಾರ್ಮಿಕ ಜಾಗೃತಿಯನ್ನು ಉಂಟು ಮಾಡಿತು.

1893 ರಿಂದ ಪ್ರಾರಂಭಗೊಂಡ ಪತ್ರಿಕಾ ಆಂದೋಲನ ಸುಮಾರು 1960ರ ದಶಕದ ವರೆಗೆ ಅನೇಕ ಏಳು–ಬೀಳುಗಳನ್ನು ಕಂಡು ನಂತರ ಒಂದು ನಂತರ ಒಂದು ಸ್ಥಿರವಾದ ಹಂತಕ್ಕೆ ಬಂದು ತಲುಪಲು ಸಾಧ್ಯವಾಯಿತು.

'ಸಾರಥಿ' ಆಧುನಕ ಕನ್ನಡ ಪತ್ರಿಕೋದ್ಯಮದಲ್ಲಿ ತಂತ್ರಜ್ಞಾನವನ್ನು ಅದರ ಆರಂಭದ ಕಾಲದಲ್ಲಿ ಅಳವಡಿಸಿಕೊಂಡು ಜಿಲ್ಲೆಯಲ್ಲಿ ಅವತರಿಸಿದ ಜನಪ್ರಿಯ ಪತ್ರಿಕೆ ಎಂದರೆ 'ಸಾರಥಿ'. ಪತ್ರಿಕೋದ್ಯಮದ ಮುಖ್ಯವಾಹಿನಿಯ ಪತ್ರಿಕೆಯಾಗಿದ್ದ 'ಸಾರಥಿ' ಜನಸಾಮಾನ್ಯರಲ್ಲಿ ಪತ್ರಿಕಾ ವಾಚನಾಭಿರುಚಿಯನ್ನು' ಆಸಕ್ತಿಯನ್ನು ಬೆಳೆಸುವಲ್ಲಿ ಸಾಕಷ್ಟು ಯಶಸ್ವಿಯಾಗಿದೆ.

1966–67ರ ಅವಧಿಯಲ್ಲಿ ರಾಘು ಜಾಗೀರದಾರ ಅವರ ಸಂಪಾದಕತ್ವದಲ್ಲಿ ಹೊರ ಬರುತ್ತಿದ್ದ 'ಸಾರಥಿ' ರಾಜಕೀಯ ವಿಷಯಗಳನ್ನು ಅತ್ಯಂತ ಸ್ವಾರಸ್ಯಕರವಾಗಿ ಬರೆಯುತ್ತಿತ್ತು. ಸಮಾಜದ ಎಲ್ಲ ವಿಷಯಗಳನ್ನು, ಆಸಕ್ತಿಗಳನ್ನು ಒಳಗೊಂಡ 'ಸಾರಥಿ' ಜನಮನವನ್ನು ಸೂರೆಗೊಂಡಿತ್ತು.

ಈ ಪತ್ರಿಕೆಯ ಒಂದು ಪ್ರಮುಖ ಸಾಧನೆ ಮತ್ತು ಶ್ರೇಯಸ್ಸು ಎಂದರೆ ಇಂದಿಗೆ ಸುಮಾರು ನಾಲ್ಕು ದಶಕಳ ಹಿಂದೆಯೇ ಅದು ಸುದ್ದಿ ಸಂಸ್ಥೆಯ ಟೆಲಿಪ್ರಿಂಟರ್ (ದೂರಮುದ್ರಕ) ವ್ಯವಸ್ಥೆಯನ್ನು ಪಡೆದುಕೊಂಡಿತ್ತು. ಇದರಿಂದಾಗಿ ಸ್ಥಳೀಯ, ಪ್ರಾದೇಶಿಕ ಸುದ್ದಿ– ಬೆಳವಣಿಗೆಗಳ ಜೊತೆಗೆ ದೇಶ–ವಿದೇಶಗಳ ಸುದ್ದಿ ಸಮಾಚಾರವೂ ಟೆಲಿಪ್ರಿಂಟರ್ ಸೌಲಭ್ಯದಿಂದಾಗಿ ದೊರಕುತ್ತಿತ್ತು.

ರಾಘು ಜಾಗೀರದಾರ ಅವರು ಮೂಲತಃ ಕಲಬುರಗಿ ಜಿಲ್ಲೆಯಾವರಾದರೂ ಅವರು ಶಿಕ್ಷಣ ಪಡೆದದ್ದು ಬಂಗಾಲದ ಶಾಂತಿನಿಕೇತನದಲ್ಲಿ. ಅನೇಕ ವರ್ಷಗಳ ಕಾಲ ಕಲ್ಕತ್ತೆಯಲ್ಲಿದ್ದು, ಬಂಗಾಲಿ ಭಾಷೆಯನ್ನು ಕಲಿತು ಅದರಲ್ಲಿ ನಿಪುಣತೆಯನ್ನು ಸಾಧಿಸಿದರು. ಬಂಗಾಳಿಯಲ್ಲಿ ನಿರರ್ಗಳವಾಗಿ ಮಾತನಾಡುವುದಷ್ಟೇ ಅಲ್ಲ ಬರವಣಿಗೆಯಲ್ಲೂ ಪ್ರಾವಿಣ್ಯತೆಯನ್ನು ಸಾಧಿಸಿದ್ದರು.ಬಂಗಾಲಿ ಜೊತೆಗೆ ಇಂಗ್ಲೀಷ ಭಾಷೆಯ ಮೇಲೆಯೂ ಪ್ರಭುತ್ವ ಸಾಧಿಸಿದ್ದರು.

ಕಲ್ಕತ್ತೆಯ 'ಆನಂದ ಬಜಾರ' ಪತ್ರಿಕಾ ಸಮೂಹದ 'ಹಿಂದಸ್ತಾನ ಸ್ಟ್ಯಾಂಡರ್ಡ' ಪತ್ರಿಕೆಯ ದೆಹಲಿ ಆವೃತ್ತಿಯ ಸ್ಥಾನಿಕ ಸಂಪಾದಕರಾಗಿ ಅವರು ಕಾರ್ಯನಿರ್ವಹಿಸಿದ್ದರು. ನೇಪಾಳದಿಂದಲೂ ಅವರು ವರದಿಗಾರಿಕೆಯನ್ನು ಮಾಡಿದರು.

ರಾಷ್ಟ್ರದ ಶ್ರೇಷ್ಠ ಸಮಾಜವಾದಿ ನಾಯಕರಾದ ರಾಮ ಮನೋಹರ ಲೋಹಿಯಾ, ಆಚಾರ್ಯ ಜೆ.ಬಿ.ಕೃಪಲಾನಿ ಮತ್ತು ಲೋಕ ನಾಯಕ ಜಯಪ್ರಕಾಶ ನಾರಾಯಣರಂತಹ ಧೀಮಂತರೊಂದಿಗೆ ನಿಕಟ ಸಂಪರ್ಕ ಹೊಂದಿದ್ದ ರಾಘು ಜಾಗೀರದಾರ 1954–60ರ ಅವಧಿಯಲ್ಲಿ ರಾಜ್ಯ ಸಭೆಯ ಸದಸ್ಯರೂ ಆಗಿದ್ದರು. ಅಪಾರ ಜ್ಞಾನ ಹಾಗೂ ಅನುಭವದ ಹಿನ್ನೆಲೆ ಉಳ್ಳವರಾದ ಜಾಗೀರದಾರ 1960ರ ದಶಕದ ಮಧ್ಯದಲ್ಲಿ ಕಲಬುರಗಿಗೆ ಮರಳಿದ ಮೇಲೆ 'ಸಾರಥಿ'ಯನ್ನು ಆರಂಭಿಸಿದರು. ಕನ್ನಡದೊಂದಿಗೆ ಅನೇಕ ವರ್ಷಗಳ ಕಾಲ ಸಂಪರ್ಕ ಕಳೆದುಕೊಂಡಿದ್ದ ಜಾಗೀರದಾರರಿಗೆ ಕನ್ನಡ ಓದಲು ಬರೆಯಲು ಅಷ್ಟಾಗಿ ಬರುತ್ತಿರಲಿಲ್ಲ. ಆದರೆ ಕನ್ನಡದಲ್ಲಿ ಎಲ್ಲರಂತೆ ಮಾತನಾಡುತ್ತಿದ್ದರು. 'ಸಾರಥಿ' ಪತ್ರಿಕೆಯ ಸಂಪಾದಕೀಯ ವಿಭಾಗದಲ್ಲಿ ಕೆಲಸ ಮಾಡಿದ ಪ್ರಮುಖರ ಪೈಕಿ ಸುಮಾರು ನಾಲ್ಕು ದಶಕಗಳ ಕಾಲ ಪತ್ರಿಕೋದ್ಯಮಕ್ಕೆ ನಿಸ್ವಾರ್ಥ ಹಾಗೂ ಪ್ರಾಮಾಣಿಕ ಸೇವೆ ಸಲ್ಲಿಸಿದ ವಿ.ಎನ್.ಕಾಗಲಕರ್ ಪ್ರಮುಖರು. ಪತ್ರಿಕೋದ್ಯಮದಲ್ಲಿ ತೀವ್ರ ಆಸಕ್ತಿ ಉಳ್ಳವರಾಗಿದ್ದ ಕಾಗಲಕರ್ ಸಾರಥಿಯನ್ನು ಸರ್ವಾಂಗ ಸುಂದರ ಪತ್ರಿಕೆಯಾಗಿ ಹೊರತರಲು ಸಾಕಷ್ಟು ಶ್ರಮಿಸಿದರು. ಮೊದಲು ವಾರಪತ್ರಿಕೆಯಾಗಿದ್ದ ಸಾರಥಿ ನಂತರ ದಿನ ಪತ್ರಿಕೆಯಾಯಿತು. ಕಾಗಲಕರ್ ಅವರ ಒತ್ತಾಸೆಯ ಮೇರೆಗೆ ವಸಂತ ಕುಷ್ಟಗಿ ಅವರು 'ಸಾರಥಿ' ಯೊಂದಿಗೆ ಸಂಪರ್ಕ ಹೊಂದಿದರು. ಸಾರಥಿಯ ಕರಡು ಪ್ರತಿಯನ್ನೋದಿ ತಿದ್ದುವ ಜವಾಬ್ದಾರಿ ವಸಂತ ಕುಷ್ಟಗಿ ಅವರ ಮೇಲಿತ್ತು.

'ಸಾರಥಿ'ಯನ್ನು ಜನಪ್ರಿಯಗೊಳಿಸಿ ಅದನ್ನು ಜನಾನುರಾಗಿಯಾಗಿ ಮಾಡಿದ ರಾಘು ಜಾಗೀರದಾರ ಅವರು ಜನಸಾಮಾನ್ಯರ ದೃಷ್ಟಿಯಲ್ಲಿ ಸಾರಥಿ ಜಾಗೀರದಾರರೇ ಆಗಿದ್ದರು. ಗುಲ್ಬರ್ಗದಲ್ಲಿ ಕನ್ನಡ ಪತ್ರಿಕೋದ್ಯಮದ ಬೆಳವಣಿಗೆಯಲ್ಲಿ 'ಸಾರಥಿ' ಪ್ರಯೋಗ ಅತ್ಯಂತ ಮಹತ್ವದ್ದಾಗಿದೆ.

ಇದೇ ಅವಧಿಯಲ್ಲಿ ಟಿ. ಸಿದ್ದಪ್ಪ ಎಂಬುವವರು 'ಕಲ್ಯಾಣ' ಎಂಬ ವಾರಪತ್ರಿಕೆ ಹೊರಡಿಸುತ್ತಿದ್ದರು. 1970ರಲ್ಲಿ ಸಗರ ಕೃಷ್ಣಚಾರ್ಯರು ಹೊರತಂದ 'ಮಂದಾಕಿನಿ' ತ್ರೈಮಾಸಿಕ ಮತ್ತೊಂದು ಸಾಹಿತ್ಯ–ಸಾಂಸ್ಕೃತಿಕ ಪತ್ರಿಕೆ. ಡಾ. ಸಿದ್ದಯ್ಯ ಪುರಾಣಿಕ, ಇಟಗಿ ರಾಘವೇಂದ್ರರಾವ್ ಮತ್ತು ವಸಂತ ಕುಷ್ಟಗಿ 'ಮಂದಾಕಿನಿ'ಯ ಸಲಹಾ ಸಮಿತಿಯಲ್ಲಿದ್ದರು.

ಶೈಕ್ಷಣಿಕ ಕ್ಷೇತ್ರಕ್ಕೆ ಸಂಬಂದಿಸಿದಂತೆ 'ಜೀವನವಿಕಾಸ' ಪತ್ರಿಕೆ ಉತ್ತಮ ಕೆಲಸ ಮಾಡಿದೆ. ಇದರ ಜೊತೆಗೆ 'ಸಮಾಚಾರ', 'ಸುವಿಚಾರ' ಪತ್ರಿಕೆಗಳೂ ಇದ್ದವು.

ಗುಲ್ಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಪ್ರಾಧ್ಯಾಪಕರಾಗಿದ್ದ ಡಾ.ಸಂಗಮೇಶ ಸವದತ್ತಿಮಠ ಅವರು ಕನ್ನಡ ಸಾಹಿತ್ಯ ಸಂಶೋಧನೆಗೆ ಮೀಸಲಾದ 'ಸಂಶೋಧನೆ' ಎಂಬ ಪತ್ರಿಕೆಯನ್ನು ಹೊರತರಲು ಪ್ರಾರಭಿಸಿದ್ದು ಒಂದು ವಿಶೇಷ. ಯಾರು ಯಾವ ಸಂಶೋಧನೆ ಕೈಕೊಂಡರು ಎಂಬುದರ ಜೊತೆಗೆ ಸಂಶೋಧನೆಯ ಒಲವುಗಳನ್ನು ಈ ಪತ್ರಿಕೆಯಿಂದ ತಿಳಿದುಕೊಳ್ಳಲು ಸಾಧ್ಯವಾಗುತ್ತದೆ. ಅಕೆಡೆಮಿಕ್ ವಲಯದಲ್ಲಿ ಇದೊಂದು ಪ್ರಮುಖ ವಿಶೇಷ, ಮೌಲಿಕ ಪತ್ರಿಕೆಯಾಗಿದ್ದು 'ಸಂಶೋಧನೆ' ಇಂದಿಗೂ ಮುಂದುವರೆದುಕೊಂಡು ಬಂದಿರುವುದು ಸಮಾಧಾನ ಮತ್ತು ಹರ್ಷದ ಸಂಗತಿ.

ವೀರಣ್ಣ ದಂಡೆ ಅವರ 'ಕವಿರಾಜ ಮಾರ್ಗ' ಮತ್ತು ಕಿರಣ ಪಾಟೀಲರ 'ಕಾವ್ಯ' ಗಮನ ಸೆಳೆಯುವ ಮತ್ತೆರಡು ವಿಶೇಷ ಪತ್ರಿಕೆಗಳಾಗಿವೆ.

'ಕ್ರಾಂತಿ' ಈಲ್ಲೆಯ ಪತ್ರಿಕೋಧ್ಯಮದ ಸಂದರ್ಭದಲ್ಲಿ 'ಕ್ರಾಂತಿ' ದಿನ ಪತ್ರಿಕೆವಿಶೇಷವಾಗಿ ಉಲ್ಲೇಖನಿಯ, ಹೆಸರಿಗೆ ತಕ್ಕಂತೆ ಅದು ಅತ್ಯಂತ 'ಕ್ರಾಂತಿಕಾರಿ' ಪತ್ರಿಕೆಯೇ ಆಗತ್ತು. 1962ರಲ್ಲಿ ಹುಬ್ಬಳ್ಳಿಯಲ್ಲಿ ಆರಂಭವಾದ 'ಕ್ರಾಂತಿ' 1965ರಲ್ಲಿ ಗುಲ್ಬರ್ಗಾಕ್ಕೆ ವರ್ಗಾವಣೆ ಗೊಂಡಿತು. ಕಳೆದ 45 ವರ್ಷಗಳಿಂದ ನಿರಂತರವಾಗಿ ನಡೆದು ಕೊಂಡು ಬರುತ್ತಿರುವ 'ಕ್ರಾಂತಿ' ತನ್ನ ಬೆಳ್ಳಿ ಹಬ್ಬವನ್ನು ಪೂರ್ಣಗೊಳಿಸಿ ಸುವರ್ಣ ಮಹೋತ್ಸವದತ್ತ ದಾಪುಗಾಲು ಹಾಕುತ್ತಿದೆ.

ಎಂ. ಸಿದ್ಧರಾಮೇಶ್ವರ ಅವರ ಸಂಪಾದತ್ವದಲ್ಲಿ ಆರಂಭಗೊಂಡ 'ಕ್ರಾಂತಿ' 1970ರ ದಶಕದಲ್ಲಿ ಕಲ್ಬುರ್ಗಿಯ ಮನೆ ಮನೆ ಮಾತಿನ ಪತ್ರಿಕೆಯಾಗಿತ್ತು. 1983ರಲ್ಲಿ ಸಿದ್ಧಾರಾಮೇಶ್ವರ ಅವರ ಕೊಲೆಯಿಂದಾಗಿ 'ಕ್ರಾಂತಿ' ಜಿಲ್ಲೆಯ ಪತ್ರಿಕೋಧ್ಯಮದ ಇತಿಹಾಸದಲ್ಲಿ ವಿಶೇಷ ಸ್ಥಾನ ಪಡೆಯುತ್ತದೆ. ಸಿದ್ಧಾರಾಮೇಶ್ವರ ಅವರ ಪತ್ನಿ ಶ್ರೀಮತಿ ಅನ್ನಪೂರ್ಣಾ ಅವರು ಪತ್ರಿಕೆಯನ್ನು ಮುನ್ನಡೆಸಿಕೊಂಡು ಬರುತ್ತಿದ್ದಾರೆ. ಅವರ ಪುತ್ರ ಕ್ರಾಂತಿಕುಮಾರ ಪತ್ರಿಕೆಯ ಕಾರ್ಯನಿರ್ವಹಿಸುತ್ತ ಬಂದಿದ್ದಾರೆ. ಆಧುನಿಕ ಕಂಪ್ಯೂಟರ್ ತಂತ್ರಜ್ಞಾನವನ್ನು ಸಂಪೂರ್ಣವಾಗಿ ಬಳಸಿಕೊಂಡ ಜಿಲ್ಲಾಮಟ್ಟದ ಕೆಲವೇ ಪತ್ರಿಕೆಗಳಲ್ಲಿ 'ಕ್ರಾಂತಿ' ಪ್ರಮುಖವಾದದ್ದು. ಉತ್ತಮ ವಿನ್ಯಾಸ, ಮುದ್ರಣದಿಂದ 'ಕ್ರಾಂತ್ರಿ' ಗಮನ ಸೆಳೆಯುತ್ತದೆ.

'ಸತ್ಯಕಾಮ' ಪಿ. ಎಂ. ಮಣ್ಣೂರ ಅವರ ಸಂಪಾದಕತ್ವದ ಇಪ್ಪತ್ತೈದು ವರ್ಷಗಳ ಕಾಲ ನಿರಂತರ ಸಾರ್ಥಕ ಸೇವೆಯನ್ನು ಸಲ್ಲಿಸಿದ ಶ್ರೇಯಸ್ಸು ಈ 'ಸತ್ಯಕಾಮ'ಕ್ಕೆ ದಿನ ಪತ್ರಿಕೆಗೆ ಸಲ್ಲುತ್ತದೆ. ಈ ಪತ್ರಿಕೆಯೂ ವಿಜಾಪುರದ ಆವೃತ್ತಿಯನ್ನು ಹೊಂದಿದೆ.

ರಾಜೇಂದ್ರ ಪಾಟೀಲ ಅವರ 'ಗ್ರಿನೋಬಲ್ಸ್' ದಿನ ಪತ್ರಿಕೆ 1965ರಲ್ಲಿ ಗುಲ್ಬರ್ಗಾಕ್ಕೆ ಸ್ಥಳಾಂತರಗೊಂಡಿತು. ಎಸ್.ಎಲ್. ಜೇವರ್ಗಿ ಅವರು1973ರಲ್ಲಿ ಆರಂಭಿಸಿದ 'ಶಾಸನ' ದಿನಪತ್ರಿಕೆ ಇಂದಿಗೂ ತನ್ನ ಅಸ್ತಿತ್ವವನ್ನು ಉಳಿಸಿಕೊಂಡಿದೆ. ಮೂರು ದಶಕದ ಕಾಲಕ್ಕೂ ಮೀರಿ ಈ ಪತ್ರಿಕೆ ನಡೆದುಕೊಂಡು ಬಂದಿದೆ.

ಜಿಲ್ಲಾ ಕೇಂದ್ರದಿಂದ ಪ್ರಕಟವಾಗುವ ಇತರ ಪ್ರಮುಖ ದಿನ ಪತ್ರಿಕೆಗಳೆಂದರೆ 'ಕನ್ನಡ ಬಂಧು' (ಜಯಪ್ರಕಾಶ ಕುಕರ್ಣಿ), 'ಚಿಂತಕ' (ಶ್ರೀಮತಿ ಶೀಲಾ ತವಾರಿ) 'ಭಾಗ್ಯ ಕಿರಣ' (ವೀರಣಮಡಿವಾಳ) 'ಜೈಭೀಮ ಗದೆ' (ಶಂಕರ ಕೊಡ್ಲಾ) 'ವಿಶ್ವ ಪ್ರಚಾರ' (ವೆಂಕಟರಾವ್ ಖಮಿತ್ಕರ್) 'ಕಲ್ಬುರ್ಗಿ ವಾಣಿ' (ಕೇದಾರ ಲಿಂಗಯ್ಯ ಹಿರೇಮಠ) 'ನೃಪತುಂಗ' ಶಿವರಾಯ ದೊಡ್ಡಮನಿ).

ಈಲ್ಲೆಯಿಂದ ಪ್ರಕಟಗೊಳ್ಳುವ ಅನೇಕ ಪತ್ರಿಕೆಗಳ ಪೈಕಿ ಕೆಲವು ಹೀಗಿವೆ. ಶೋಷಿತ, ವಿಜಯ ಕ್ರಾಂತ್ರಿ, ಶೋಷಿತರ ಕೂಗು, ಶೋಷಿತ ಶಕ್ತಿ, ಗ್ರಾಮ ವಾಣಿ, ಗ್ರಾಮಾಭಿಮಾನಿ, ನ್ಯಾಯ ಕ್ರಾಂತಿ, ಸಂಶೋಧನೆ, ಕಲಾಗಂಗಾ, ಆಕ್ರೋಶ, ಶಳ್ಳಗಿ ಪತ್ರಿಕೆ, ಲೋಕ ಸಂಚಾರ, ಸಮರ, ಮಹಾಂತ ಜ್ಯೋತಿ, ಗಂಗಾಗ್ನಿ, ಯುಗ ದರ್ಶಿನಿ, ಉದಯ, ವಾಣಿ ಸಾಮ್ರಾಟ, ವಿಜ್ಞಾನ ಕಹಳೆ, ನಿತ್ಯ ಸಂಗತಿ, ಜನಾಭಿಮಾನಿ, ದಾಸೋಹ ಜ್ಞಾನರತ್ನ, ಕೆಂದೂಳಿ, ಸುದ್ದಿಸಾರ, ಉಪ್ಪಿನ್ ಪತ್ರಿಕೆ, ಅಗ್ನಿ ಅಂಕುರ, ವರ್ಷಾ, ವಾಹಿನಿ, ಶಿವಾಕ್ರೋಶ, ಪ್ರಚಾರ ಪ್ರಪಂಚ, ಕಲ್ಯಾಣ ನಾಡು, ಜಗವಾಣಿ, ಕಲ್ಬುರ್ಗಿ ಪ್ರತಿನಿಧಿ, ಅವತಾರಿ, ಕನ್ನಡ ಶಕ್ತಿ, ಮಧುರವಾಣಿ,

ಹಾಯ್ ಗುಲ್ಬರ್ಗಾ, ಗನ್ ಪಾಯಿಂಟ್, ಹೀಯರ್ ಗುಲ್ಬರ್ಗಾ, ಇತ್ಯಾದಿ.

**ಸಂಜೆ ಪತ್ರಿಕೆಗಳು**

ಜಿಲ್ಲಾ ಕೇಂದ್ರವಾದ ಗುಲ್ಬರ್ಗಾದಿಂದ ಎರಡು ಪ್ರಮುಖ ಸಂಜೆ ಪತ್ರಿಕೆಗಳು ಪ್ರಕಟವಾಗುತ್ತಿರುವುದು ಒಂದು ವಿಶೇಷ. ಬೆಂಗೂರಿನಿಂದ ಪ್ರಕಟವಾಗುವ ಕರ್ನಾಟಕದ ಜನಪ್ರಿಯ ಮತ್ತು ಅತ್ಯಧಿಕ ಪ್ರಸಾರದ 'ಸಂಜೆವಾಣಿ' ತನ್ನ ಕಲ್ಬುರ್ಗಿ ಆವೃತ್ತಿಯನ್ನು 1994ರಲ್ಲಿ ಪ್ರಾರಂಭಿಸಿತು.

ಪ್ರತಿ ದಿನವೂ ಬ್ಯಾನರ ತಲೆಬರಹದೊಂದಿಗೆ ರೋಚಕ ಸುದ್ದಿಯನ್ನು ಹೊತ್ತು ತರುವ 'ಸಂಜೆ ವಾಣಿ' ಕಲ್ಬುರ್ಗಿ ಜನರ ಜೀವನದ ಅವಿಬಾಜ್ಯ ಅಂಗವಾಗಿ ಬೆಳೆದು ಬಂದಿದೆ. ಬೆಳಗಿನ ಬೆಳವಣಿಗೆಗಳನ್ನೆಲ್ಲ ಹೊತ್ತು ಬರುವ ಸಂಜೆಯ ದಿನ ಪತ್ರಿಕೆಗಳಿಗೆ ನಿರ್ದಿಷ್ಟ ಚಂದಾದಾರರಿಗಿಂತಲೂ ಬಿಡಿ ಪತ್ರಿಕೆಗಳ ಮಾರಾಟವೇ ಅತ್ಯಧಿಕವಾಗಿವೆ.

ತಮಿಳುನಾಡಿನ ಉದ್ಯಮಿ ಶ್ರೀ ಬಿ. ಎಸ್. ಮಣಿ ತಮ್ಮ ಕೈಗಾರಿಕಾ ಸಾಹಸ ಪ್ರವೃತ್ತಿಯಿಂದಾಗಿ 'ಸಂಜೆವಾಣಿ'ಯನ್ನು ಕರ್ನಾಟಕದಾದ್ಯಂತ ಪಸರಿಸುವಂತೆ ಮಾಡಿದ್ದಾರೆ. ಪತ್ರಿಕೋದ್ಯಮಿಯ ಉದ್ಯಮಶೀಲತೆಗೆ ಒಂದು ಉತ್ತಮ ನಿದರ್ಶನ 'ಸಂಜೆವಾಣಿ'.

ಕೇವಲ ಬೆಂಗೂರು ಮತ್ತು ಸುತ್ತಮುತ್ತಲ ಪ್ರದೇಶವಷ್ಟೇ ಸೀಮಿತವಾಗಿದ್ದ 'ಸಂಜೆವಾಣಿ'ಯನ್ನು 21.10.1994ರದು ಕಲ್ಬುರ್ಗಿಯಿಂದ ಮುದ್ರಿಸಲು ಆರಂಭವಾಯಿತು. ಕಲ್ಬುರ್ಗಿ ನಗರ, ಗ್ರಾಮೀಣ ಹಾಗೂ ಬೀದರ ಜಿಲ್ಲೆ ಹೀಗೆ ಮೂರು ಆವೃತ್ತಿಯ ಮುದ್ರಣಗಳು ಕಲ್ಬುರ್ಗಿಯಲ್ಲಿ ಪ್ರಕಟವಾಗತ್ತವೆ.

'ಕರ್ನಾಟಕ ಸಂಧ್ಯಾಕಾಲ' ಕಲ್ಬುರ್ಗಿಯ ಎರಡನೇ ಜನಪ್ರಿಯ ಸಂಜೆ ಪತ್ರಿಕೆ. ಇದು ಹೊರಗಿನವರು ಬಂದು ಇಲ್ಲ ಪ್ರಾರಭಿಸಿದ್ದಲ್ಲ. ಡಿ ಶಿವಲಿಂಪ್ಪನವರು ತಮ್ಮದೇ ಆದ ಸ್ವಂತ ಆಧುನಿಕ ಮುದ್ರಾಣಾಲಯದಲ್ಲಿ 30–5–2000ರಂದು ಪತ್ರಿಕೆಯನ್ನು ಪ್ರಾರಂಭಿಸಿದ್ದು ಅದನ್ನು ಯಶಸ್ವಿಯಾಗಿ ನಡೆಸಿಕೊಂಡು ಬಂದಿದ್ದಾರೆ. ಬಹುವರ್ಣದಲ್ಲಿ ಮುದ್ರಣವಾಗುವ ಈ ಪತ್ರಿಕೆ ನಗರ, ಗ್ರಾಮೀಣ ಹಾಗೂ ಬೀದರ ಹೀಗೆ ಮೂರು ಆವೃತ್ತಿಗಳನ್ನು ಮುದ್ರಿಸತ್ತದೆ. ಸ್ಥಳೀಯ ಸುದ್ದಿಗಳನ್ನು ಹೆಚ್ಚಾಗಿ ಹೊಂದಿರುವ 'ಸಂಧ್ಯಾಕಾಲ' ಸಂಜೆಯ ಓದುಗರನ್ನು ತಣಿಸುವಲ್ಲಿ ಯಶಸ್ವಿಯಾಗಿದೆ. ಶಿವಂಲಿಗಪ್ಪನರೇ ಪತ್ರಿಕೆಯ ಸಂಪಾದಕರಾಗಿದ್ದಾರೆ.

'ಮುಸ್ಸಂಜೆ ವಿಶ್ವ' ಎಂಬ ಮತ್ತೊಂದು ಸಂಜೆ ಪತ್ರಿಕೆ ಶರಣು ಗೊಬ್ಬೂರ ಅವರ ಸಂಪಾದಕತ್ವದಲ್ಲಿ ಪ್ರಾರಂಭವಾಯಿತು. ಆದರೆ ಕೆಲವೇ ತಿಂಗಲಲ್ಲಿ ಆರ್ಥಿಕ ಮುಗ್ಗಟ್ಟಿನಿಂದ ಪತ್ರಿಕೆ ನಿಂತು ಹೋಯಿತು.

ಕಲ್ಬುರ್ಗಿಯ ಸಂಜೆ ದಿನ ಪತ್ರಿಕೆಗಳು ಓದುಗರನ್ನು ಬೆಳೆಸುವುದರ ಜೊತೆಗೆ ನಿರುದ್ಯೋಗಿ ಯುವಕರಿಗೆ ಹಲವು ಉದ್ಯೋಗದ ಅವಕಾಶಗಳನ್ನು ನೀಡಿವೆ.

**ಇತರ ಭಾಷಾ ಪತ್ರಿಕೆಗಳು**

ಜಿಲ್ಲೆಯ ಪತ್ರಿಕೋದ್ಯಮ ಪ್ರಾರಂಭವಾದದ್ದು ಮರಾಠಿ ಪತ್ರಿಕೆಯಿಂದಾದರು ಇಂದು ಯಾವುದೇ ಮರಾಠಿ ಪತ್ರಿಕೆ ಪ್ರಕಟವಾಗುತ್ತಿಲ್ಲ. ಆದರೆ ಕೆಲವು ಉರ್ದು ಪತ್ರಿಕೆಗಳು ಕಲ್ಬುರ್ಗಿಯಿಂದ ಪ್ರಕಟವಾಗುತ್ತವೆ. ಕಲ್ಬುರ್ಗಿ ನಗರದಲ್ಲಿ ಅಧಿಕ ಸಂಖ್ಯೆಯಲ್ಲಿರುವ ಮುಸಲ್ಮಾನರ ವಾಚನಾಭಿರುಚಿಯನ್ನು ಅವು ತಣಿಸುತ್ತವೆ.

ಉರ್ದು ಪತ್ರಿಕೆಗಳಲ್ಲಿ ಉಲ್ಲೇಖರ್ಹವಾದವುಗಳೆಂದರೆ ಹಕೀಂ ಶಕೀಲ ಅವರ 'ಸಲಾಮತ್', 'ಬಹಮನಿ ನ್ಯೂಸ್', ಇನ್ ಕಿಲಾಬ–ಎ–ಡೆಕ್ಕನ್, ಮತ್ತು 'ಕೆ.ಬಿ.ಎನ್. ಟೈಮ್ಸ್'.

ಬಾಬುರಾವ್ ಹಾಗರಗಿ ಅವರು 'ಫರ್ಜ' ಎಂಬ ಹಿಂದಿ ಪತ್ರಿಕೆಯನ್ನು ಈ ಹೀಂದೆ ನಡೆಸುತ್ತಿದ್ದರು. ಗೋವಿಂದರಾವ್ ಖಮಿತ್ಕರ್ ಅವರು 'ವೃತ್ತ ಮಂಜರಿ' ಎಂಬ ಹಿಂದಿ ಪತ್ರಿಕೆಯನ್ನು ಕಳೆದ ಕೆಲವಾರು ವರ್ಷಗಳಿಂದ ನಡೆಸಿಕೊಂಡು ಬರುತ್ತಿದ್ದಾರೆ. ದಿ॥ ಹನುಮಂತರಾವ್ ತಾಡಪತ್ರಿ ಅವರು 'ಕರ್ನಾಟಕ ಸ್ಟ್ಯಾಂಡರ್ಡ್' ಎಂಬ ಇಂಗ್ಲಿಷ ದಿನಪತ್ರಿಕೆಯನ್ನು ನಡೆಸುತ್ತಿದ್ದರು.

**ಇತರ ಪತ್ರಿಕೆಗಳು**

ಈಲ್ಲೆಯಲ್ಲಿ ಪತ್ರಿಕೆಗಳ ಬೆಳವಣಿಗೆ ವೈವಿದ್ಯಮಯವಾಗಿದೆ. ಅನೇಕ ವಿಷಯಗಳಿಗೆ ಸಂಬಂಧಿಸಿದಂತೆ ಬೇರೆ ಬೇರೆ ರೀತಿಯ ಹತ್ತು ಹಲವು ಪತ್ರಿಕೆಗಳು ಇಲ್ಲಿ ಪ್ರಕಟಗೊಳ್ಳುತ್ತವೆ. ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ, ಸಾಂಸ್ಕೃತಿಕ ರಂಗಭೂಮಿ, ಸಂಶೋಧನೆ ವಾಣಿಜ್ಯ, ಕೈಗಾರಿಕೆ, ಅಪರಾಧ ಹೀಗೆ ಅನೇಕ ವಿಷಯಗಳಿಗಾಗಿಯೇ ಪತ್ರಿಕೆಗಳು ಬೆಳೆದು ಬಂದದ್ದು ಈ ಒಂದು ನಿಟ್ಟಿನಲ್ಲಿ ಪತ್ರಿಕೋದ್ಯಮದ ಬೆಳವಣಿಗೆಗೆ ತೃಪ್ತಿಕರವಾಗಿದೆ ಎಂದು ಹೇಳಬಹುದು. ಇವುಗಳಲ್ಲಿ ಕೆಲವೇ ಕೆಲವು ನಿಯಮಿತವಾಗಿ ಬರುತ್ತದ್ದರೆ ಬಹಳಷ್ಟು ಪತ್ರಿಕೆಗಳು ಆಗೊಮ್ಮೆ ಈಗೊಮ್ಮೆ ಗೋಚರಿಸುತ್ತವೆ.

ಬಾರತದ ವೃತ್ತ ಪತ್ರಿಕೆಗಳ ರಜಿಸ್ಟ್ರಾರ್ ಅವರ ಪ್ರಕಾರ 2008ರ ವರೆಗಿನ ಮಾಹಿತಿಯಂತೆ 137 ಪತ್ರಿಕೆಗಳು ಜಿಲ್ಲೆಯಲ್ಲಿ ನೊಂದಾಯಿಸಿಕೊಂಡಿವೆ. ಇವುಗಳಲ್ಲಿ ಕನ್ನಡ ಪತ್ರಿಕೆಗಳದ್ದೆ ಮೇಲುಗೈ. ಅವುಗಳ ಸಂಖ್ಯ 95. ದಿನ ಪತ್ರಿಕೆಗಳ ಸಂಖ್ಯ 28 ಇದ್ದರೆ ವಾರ ಪತ್ರಿಕೆಗಳ ಸಂಖ್ಯ 17; ಪಾಕ್ಷಿಕ 17 ಮತ್ತು ಮಾಸ ಪತ್ರಿಕೆಗಳ ಸಂಖ್ಯ 27

ಕನ್ನಡವಲ್ಲದ ಬೇರೆ ಭಾಷಯ ಪತ್ರಿಕೆಗಳು ಇಲ್ಲಿ ಪ್ರಕಾಶನಗೊಳ್ಳುತವೆ. ಉರ್ದು, ಹಿಂದಿ ಇಂಗ್ಲಿಷ, ದ್ವಿಭಾಷೆ ಮತ್ತು ಬಹುಭಾಷೆಯಲ್ಲಿಯೂ ಪತ್ರಿಕೆಗಳನ್ನು ಕಾಣಬಹುದು.

ಆಶ್ಚರ್ಯದ ಸಂಗತಿ ಎಂದರೆ ಒಂದು ತಮಿಳು ಪತ್ರಿಕೆಯೂ ಈ ಜಿಲ್ಲೆಯಲ್ಲಿ ನೋಂದಾಯಿಸಿಕೊಂಡ ದಾಖಲೆ ಇದೆ. ಎಂ. ಎಂ. ದೇವರಾಜ ಎಂಬುವವರು ಸಂಪಾದಕತ್ವದಲ್ಲಿ 'ಕನ್ನಡ ಸೆಲ್ವಿ' ಎಂಬ ತಮಿಳು ಪಾಕ್ಷಿಕ ಈ ಜಿಲ್ಲೆಯಲ್ಲಿ 1966ರಷ್ಟು ಹಿಂದೆಯೇ ಬರತ್ತಿತ್ತು. ಸ್ಥಳಿಯ ಕನ್ನಡ ಪತ್ರಿಕೆಗಳ ಬೆಳವಣಿಗೆ ಇನ್ನೂ ಶೈಶವಾವಸ್ಥೆಯಲ್ಲಿರುವಾಗಲೇ ತಮಿಳು ಭಾಷೆಯ ಪಾಕ್ಷಿಕವುಂದು ಕಲ್ಬುರ್ಗಿಯಲ್ಲಿ ಹೊರಡುತ್ತಿದ್ದುದು ಒಂದು ವಿಶೇಷ.

**ಉರ್ದು:**

ಸಂಖ್ಯೆಯ ದೃಷ್ಟಿಯಿಂದ ಕನ್ನಡದ ನಂತರ ಸ್ತಾನ ಪಡೆಯುವ ಪತ್ರಿಕೆಗಳೆಂದರೆ ಉರ್ದು ಭಾಷೆಯ ಪತ್ರಿಕೆಗಳು. ಈ ಜಿಲ್ಲೆಯಲ್ಲಿ ಒಟ್ಟು 13 ಉರ್ದು ಪತ್ರಿಕೆಗಳು ಪ್ರಕಟಗೊಲ್ಲುತ್ತವೆ. ಅವುಗಳಲ್ಲಿ ನಾಲ್ಕು ದೈನಿಕ, ಐದು ಸಾಪ್ತಾಹಿಕ ಮತ್ತು ಮೂರು ಮಾಸಿಕ ಸೇರಿವೆ. ಉರ್ದು ದೈನಿಕಗಳೆಂದರೆ ಚಿರಾಗ–ಎ–ಹಿಂದ್, ದೌರ್–ಎ–ಹಾಜಿರ್, ಇಕ್ವಿಲಾಬ್–ಎ–ಡೆಕ್ಕನ್, ಕೆ.ಬಿ.ಎನ್. ಟೈಮ್ಸ್.

ವಾರಪತ್ರಿಕೆಗಳೆಂದರೆ. ಅದಲ್, ಅಖಬಾರ–ಎ–ಮಿಲ್ಲತ್, ಬಹಮನಿ ನ್ಯೂಸ್, ಕೌನ್ಸಿಲ್, ಮಸಲ್–ಎ–ಹಿಂದ್ ಮೂರು ಮಾಸಿಕಗಳೆಂದರೆ ಆಲಾಮಿಶಮಾ, ಶಹಬಜ್ ಮತ್ತು ತುಲು–ಎ–ಸಾಹಿರ್.

**ಇಂಗ್ಲಿಷ್:**

ದಾಖಲೆಗಳ ಪ್ರಕಾರ ಇಂಗ್ಲಿಷ್ ಭಾಷಯ 12 ಪತ್ರಿಕೆಗಳು ಕಲ್ಬುರ್ಗಿ ಜಿಲ್ಲೆಯಿಂದ ಹರಡುತ್ತವೆ. ಒಂದು ವಿಶೇಷವೆಂದರೆ ಇಂಗ್ಲಿಷ್‌ನಲ್ಲಿ ಹೊರಡುವ (ಪತ್ರಿಕಕೆಗಳಲ್ಲಿ ಎಲ್ಲಾ ಬಗೆಯ ನಿಯತಕಾಲಿಕೆಗಳು ಅಂದರೆ ದೈನಿಕ, ಸಾಪ್ತಾಹಿಕ, ಪಾಕ್ಷಿಕ, ತ್ರೈಮಾಸಿಕ, ಅರ್ಧವಾರ್ಷಿಕ ಮತ್ತು ವಾರ್ಷಿಕ ಪತ್ರಕೆಗಳು ಸೇರಿವೆ.

ಕಲ್ಬುರ್ಗಿಯಲ್ಲಿ ಪ್ರಕಟವಾಗುವ ಬಹುಮುಖ್ಯ ಇಂಗ್ಲಿಷ್ ದೈನಿಕ ಎಂದರೆ 'ಡೆಕ್ಕನ್ ಹೆರಾಲ್ಡ್'. ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್ ಸಂಸ್ಥೆಯವರು ಮೂಲತಃ ಬೆಂಗಳೂರಿನಿಂದ ಹೊರಡುವ ಕರ್ನಾಟಕದ ಪ್ರಮುಖ ಆಂಗ್ಲ ದಿನಪತ್ರಿಕೆಗಳಲ್ಲೊಂದಾದ 'ಡಕ್ಕನ್ ಹೆರಾಲ್ಡ್')

ರಾಜ್ಯಮಟ್ಟದ ಪ್ರಮುಖ ಇಂಗ್ಲಿಷ್ ದಿನಪತ್ರಿಕೆಗಳು ಜಿಲ್ಲೆಯಲ್ಲೆ ನೆಲೆ ಕಂಡುಕೊಂಡಿರುವುದು ಗುಲ್ಬರ್ಗಾದ ಒಂದು ವಿಶೇಷ. ಆ್ಯಂಟಿ ಕರಪ್ಶನ್ 'ರಿಪೋರ್ಟರ್' ಎಂಬ ಇಂಗ್ಲಿಷ್ ದೈನಿಕವೊಂದು ಈ ಜಿಲ್ಲೆಯಲ್ಲಿ ಪ್ರಕಟವಾಗುತ್ತಿದೆಯಂತೆ. ಆದರೆ ಅದನ್ನು ಕಂಡವರ, ಅದರ ಬಗ್ಗೆ ಅರಿವಿದ್ದವರ ಸಂಖ್ಯೆ ಬಹಳ ವಿರಳ.

ಇದಲ್ಲದೆ 'ಗುಲ್ಬರ್ಗಾ ಟು ಡೆ' ಎಂಬ ಸಾಪ್ತಾಹಿಕ ಮತ್ತು 'ಜಸ್ಟೀಸ್' ಎಂಬ ಪಾಕ್ಷಿಕ ಇಂಗ್ಲಿಷ್ ಪತ್ರಿಕೆಗಳು; 'ಇ–ಮರ್ಜ್' 'ಇಂಡಸ್ಟ್ರೀಯಲ್ ಇನ್‌ಫಾರ್ಮಂಟ್' ಮತ್ತು 'ಟೈನಿ ಟಾಟ್' ಎಂಬ ಆಂಗ್ಲ ಮಾಸಿಕಗಳು ಇಲ್ಲಿವೆ. ಜಿಲ್ಲೆಯ ಏಕೈಕ ಇಂಗ್ಲಿಷ್ ತ್ರೈಮಾಸಿಕ ಎಂದರೆ 'ಫಾರ್ಮಾಕೈನ್' ಇದು ಔಷಧ ವಿಜ್ಞಾನ ಶಾಸ್ತ್ರಕ್ಕೆ ಸಂಬಂಧಿಸಿದ ಪತ್ರಿಕೆಯಾಗಿದೆ. ಮತ್ತೆ ಎರಡು ಇಂಗ್ಲೀಷ ವಾರ್ಷಿ ಪತ್ರಿಕೆಗಳು ಈ ಜಿಲ್ಲೆಯಿಂದ ಪ್ರಕಟವಾಗುತ್ತಿವೆ. ಅವುಗಳೆಂದರೆ ಒಂದು 'ಕಲೆಕ್ಸನ್ ಆಫ್ ಇಂಡಸ್ಟ್ರಿಸ್ ಇನ್ನೊಂದು ಸರ್ವೆ ಆಫ್ ಇಂಡಸ್ಟ್ರಿಸ್ ಇವೆರಡು ಕೈಗಾರಿಕಾ ಕ್ಷೇತ್ರಗಳಿಗೆ ಸಂಬಂಧಿಸಿದ್ದ ಪತ್ರಿಕೆಗಳಾಗಿವೆ.

**ಹಿಂದಿ:**

ಹಿಂದಿ ಭಾಷಯ ನಾಲ್ಕು ಪಪತ್ರಿಕೆಗಳು ಈ ಜಿಲ್ಲೆಯಿಂದ ಹೊರಡುತ್ತವೆ. ಅವುಗಳಲ್ಲಿ ಮೂರು ದೈನಿಕ 'ಜನತಾ ಕಿ ಜನತಾ ದೃಷ್ಟಿ', 'ಕಲ್ಯಾಣ ನಾಡು' ಮತ್ತು ವೃತ್ತ ಮಂಜರಿ. ಏಕೈಕ ಹಿಂದಿ ಸಾಪ್ತಾಹಿಕ ಎಂದರೆ ಮೈತೀರ್ಥಿ.

**ದ್ವಿಭಾಷಾ ಪತ್ರಿಕೆ:**

ಕಲ್ಬುರ್ಗಿ ಜಿಲ್ಲೆ ಎಳು ದ್ವಿಭಾಷಾ ಪತ್ರಿಕೆಗಳಿಗೆ ಜನ್ಮ ನೀಡಿದೆ. ಅವುಗಳಲ್ಲಿ ಮೂರು ದೈನಿಕ, ಒಂದು ಸಾಪ್ತಾಹಿಕ, ಒಂದು ಪಾಕ್ಷಿಕ ಮತ್ತೊಂದು ಮಾಸಿಕ ಸೇರಿವೆ. ಅದ್ಭುತ ವಾಣಿ, ಕರ್ನಾಟಕ ಮಾರ್ಕೆಟ್ ಬುಲೆಟ್ ಮತ್ತು ಕರ್ನಾಟಕ ಮಾರ್ಕೆಟ್ ಮಿತ್ರ ಇವು ದ್ವಿಭಾಷಾ ದಿನ ಪತ್ರಿಕೆಗಳಾಗಿವೆ. 'ಧರ್ಮ ಮಂಥನ' ಸಾಪ್ತಾಹಿಕವಾಗಿದ್ದರೆ, ಹೈದ್ರಾಬಾದ್ ಕರ್ನಾಟಕ ಲಾ ರಿಪೋಟರ್, ಪಾಕ್ಷಿಕ ಮತ್ತು 'ಸರಕಾರಿ ಸುದ್ದಿ' ಎಂಬುವುದು ಮಾಸಿಕ ಮಾಸಿಕ ದ್ವಿಭಾಷಾ ಪತ್ರಿಕೆಗಳು.

ಶ್ರೀ ಶರಣ ಬಸವೇಶ್ವರ ಸಂಸ್ಥಾನದಿಂದ ಪ್ರಕಟವಾಗುವ 'ದಾಸೋಹ ಜ್ಞಾನರತ್ನ' ಕನ್ನಡ ಮತ್ತು ಇಂಗ್ಲೀಷನಲ್ಲಿ ಪ್ರಕಾಶನಗೊಳ್ಳುವ ಒಂದು ಪ್ರಮುಖ ದ್ವಿಭಾಷಾ ಪಾಕ್ಷಿಕ ಪತ್ರಿಕೆಯಾಗಿದೆ. ವಚನ ಸಾಹಿತ್ಯ, ಶರಣ ಸಾಹಿತ್ಯ, ದಾಸೋಹ ತತ್ವ, ವೀಶೈವ ಸಂಸ್ಕೃತಿ, ಶರಣ ಸಂಸ್ಕೃತಿ ಇತ್ಯಾದಿಗಳಿಗೆ ಮುಡಿಪಾಗಿರುವ ಈ ಪತ್ರಿಕೆ ತನ್ನದೆಯಾದ ಖ್ಯಾತಿಯನ್ನು ಪಡೆದಿದೆ. ದಾಸೋಹ ಚಿಂತನೆಯ ನೆಲೆಯಲ್ಲಿ ಆಧ್ಯಾತ್ಮವನ್ನು ಬಿಂಬಿಸುವ ಈ ಪತ್ರಿಕೆ ಮೌಲಿಕವಾದ, ವಿಚಾರಪೂರಿತ ಲೇಖನಗಳಿಂದ ಕೂಡಿರುತ್ತದೆ.

ಜಿಲ್ಲೆಯಿಂದ ಮೂರು ಬಹುಭಾಷಾ ಪತ್ರಿಕೆಗಳು ಪ್ರಕಟವಾಗುತ್ತಿದ್ದ ಅವುಗಳಲ್ಲಿ ಎರಡು ದಿನಪತ್ರಿಕೆಗಳಾಗಿರುವುದು ಒಂದು ವಿಶೇಷ, ಅವುಗಳೆಂದರೆ 'ಉದಯ ಗರ್ಜನೆ' ಮತ್ತು ಸ್ವಾಭಿಮಾನ' ಗುಲ್ಬರ್ಗಾ ವಿಶ್ವವಿದ್ಯಾಲಯ ಖಾಸಗಿ ಕಾಲೇಜು ಶಿಕ್ಷಕರ ಸಂಘದ ವಾರ್ತಾ ಪತ್ರ ಏಕೈಕ ತ್ರೈಮಾಸಿಕ ಬಹುಭಾಷಾ ಪತ್ರಿಕೆಯಾಗಿದೆ. ಗುಲ್ಬರ್ಗಾ ವಿಶ್ವವಿದ್ಯಾಲಯ ಸುಮಾರು 1990ರ ದಶಕದಲ್ಲಿ ಕೆಲವು ವರ್ಷಗಳ ಕಾಲ 'ವಿಜ್ಞಾನ ಗಂಗಾ' 'ಜ್ಞಾನ ಗಂಗಾ' ಮತ್ತು 'ಕಲಾ ಗಂಗಾ' ಎಂಬ ಸಂಶೋಧನಾ ಆಧಾರಿತ ಆರ್ಧವಾರ್ಷಿಕಕಗಳುನ್ನು ಹೊರತರುತ್ತಿತ್ತು. ಹೆಸರೇ ಸೂಚಿಚಿಸುವಂತೆ ಆಯಾ ಸಂಚಿಕೆಗಳು ಆಯಾ ವಿಷಯಕ್ಕೆ ಮೀಸಲಿದ್ದವು. ಆದರೆ ಅವು ಬಹಳ ದಿನ ನಡೆಯಲಿಲ್ಲ.

**ಗ್ರಂಥ ಋಣ:**


1) ಭಾರತೀಯ ಪತ್ರಿಕೋದ್ಯಮ – ನಾಡಗ ಕೃಷ್ಣಮೂರ್ತಿ.
2) ವೃತ್ತಪತ್ರಿಕೆ, ಅದರ ಚರಿತ್ರೆ, ಅದರ ಕರ್ತವ್ಯ, ಅದರ ಸ್ವಾತಂತ್ರ್ಯ–ಡಿ.ವಿ.ಜಿ
3) ಮುದ್ರಣ ಸಮೀಕ್ಷೆ – ಎಚ್, ನರಸಣ್ಣ
4) ನೂತನ ಮುದ್ರಣ ವಿಧಾನಗಳು – ಬಿ. ಪಿ. ಮಲ್ಲರಾಜ ಅರಸು.
5) ಕನ್ನಡ ಪತ್ರಿಕೆಗಳು – ಡಾ. ಪ್ರಭು ಖಾನಾಪುರೆ; ಕಲ್ಬುರ್ಗಿ ಜಿಲ್ಲಾ ದರ್ಶನ; ಗುಲ್ಬರ್ಗಾ ವಿಶ್ವವಿದ್ಯೆಲಯ.
6) ಕನ್ನಡ ಪತ್ರಿಕೆಗಳು – ಡಾ. ಈ. ಬಿ ವಿಸಾಜಿ; ಬೀದರ್ ಜಿಲ್ಲಾ ದರ್ಶನ; ಗುಲ್ಬರ್ಗಾ ವಿಶ್ವವಿದ್ಯೆಲಯ.
7) ಪತ್ರಿಕೋಧ್ಯಮ; ಸಾಧನೆ ಮತ್ತು ಸವಾಲುಗಳು – ಬಸವರಾಜ ಆಕಳವಾಡಿ ಕೊಪ್ಪಳ ಜಿಲ್ಲಾ ದರ್ಶನ; ಗುಲ್ಬರ್ಗಾ ವಿಶ್ವವಿದ್ಯಾಲಯ.
8) ಹೈದ್ರಾಬಾದ್ ಕರ್ನಾಟಕದ –ಕನ್ನಡ ಪತ್ರಿಕೋಧ್ಯಮದ ಕತೆ – ಪ್ರೋ. ವಸಂತ ಕುಶ್ಟಗಿ, ಸಂಯುಕ್ತ ಕರ್ನಾಟಕ;
9) ಹೈದ್ರಾಬಾದ್ ಕರ್ನಾಟಕದ ಕನ್ನಡ ಪತ್ರಿಕೋಧ್ಯಮ – ಒಂದು ನೋಟ; ಶ್ರೀನಿವಾಸ ಗಟ್ಟು; 'ತಿರುಳ್ಗನ್ನಟ' ಸ್ಮರಣ ಸಂಚಿಕೆ, ಅಖಿಲ ಭರತ ಕನ್ನಡ ಸಾಹಿತ್ಯ ಸಮ್ಮೇಳನ, ಕೊಪ್ಪಳ.
10) ಹೈದ್ರಾಬಾದ್ ಕರ್ನಾಟಕ ಹಾಗೂ ಪಂಡಿತ ತಾರಾನಾಥರು – ಡಾ. ಎನ್ ಎ. ಪಾಟಿಲ್.
11) ಅಶೋಕನ ಧರ್ಮ ಶಾಸನಗಳು – ಡಾ. ಶ್ರೀನಿವಾಸ ರಿತ್ತಿ.
12) ಕನ್ನಡನಾಡಿನ ಶಾಸನಗಳು – ಡಾ. ಪಿ. ಬಿ. ದೇಸಾಯಿ
13) ಕಿರಿಯರ ಕರ್ನಾಟಕ (ಯುವಕರ ವಿಶ್ವಕೋಶ) – ಕನ್ನಡ ವಿಶ್ವವಿದ್ಯಾಲಯ, ಹಂಪ್ಪಿ
14) ಗುಲ್ಬರ್ಗಾ ಜಿಲ್ಲಾ ಗ್ಯಾಸ್ಟಿಯರ್.